**ಡಾ. ಹೆಚ್ ಎನ್ ಮಂಜುರಾಜ್**
ಕನ್ನಡದ ಸಹ ಪ್ರಾಧ್ಯಾಪಕ
ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು
ಕೃಷ್ಣರಾಜನಗರ, ಮೈಸೂರು ಜಿಲ್ಲೆ

#5028/23, ' **ಚಾರುಮನೆ** '
ಜೈಲು ಮತ್ತು ಚರ್ಚ್ ಹಿಂಭಾಗ
17 ನೇ ವಾರ್ಡ್, ಕನಕನಗರ ಬಡಾವಣೆ 3ನೇ ಹಂತ
ಕೃಷ್ಣರಾಜನಗರ–571602

ಕದಲುಲಿ: 9900119518, 9480966890 ಮಿಂಚಂಚೆ: 1) manjuraj1969@gmail.com ಮತ್ತು 2) manjupage@gmail.com
ಮಿಂಬ್ಲಾಗು: http://www/manjupage.blogspot.com, please type on Google: MANJUPEJU

# ಬಸವಕ್ರಾಂತಿಯ ಸೋಲು–ಗೆಲುವು

ಜಗತ್ತಿನಲ್ಲಿ ನಡೆದ ದೊಡ್ಡ ವಿಪ್ಲವಗಳಲ್ಲಿ ಹನ್ನೆರಡನೆಯ ಶತಮಾನದ ವಚನಕಾರರ ಚಳವಳಿ ಹಲವು ದೃಷ್ಟಿಗಳಿಂದ ಮಹತ್ವದ್ದು. ಮೊತ್ತ ಮೊದಲ ವಿಚಾರವಾದಿ ಹಾಗೂ ಮಾನವತೆಯ ತತ್ತ್ವಜ್ಞಾನಿ ಗೌತಮ ಬುದ್ಧನ ತರುವಾಯ ಕಾಣಿಸಿಕೊಂಡ ಭಾರತದ ಶ್ರೇಷ್ಠ ಸಂತರಾದ ಬಸವಣ್ಣನವರು ತಮ್ಮ ಹೆಸರು ಮಾತ್ರದಿಂದಲೇ ಒಂದು ಕಳಕಳಿಯ ಆವರಣವನ್ನು ನಿರ್ಮಿಸಿ ಕೊಟ್ಟಿದ್ದಾರೆ. ಹಾಗೆ ನೋಡಿದರೆ ಅಣ್ಣನವರ ಬಗ್ಗೆ, ಒಟ್ಟಾರೆ ವಚನಾಂದೋಲನದ ಸಾಧನೆಯ ಬಗ್ಗೆ ಅರೆಬರೆ ಇತಿಹಾಸವನ್ನಿಟ್ಟುಕೊಂಡು ಕಣ್ಣಾರೆ ಕಂಡಂತೆ ಮಾತನಾಡುವುದು ಈಗಂತೂ ತೀರಾ ಸುಲಭ ಮತ್ತು ಸರಳವಾಗಿಬಿಟ್ಟಿದೆ. ಯಾವುದು ಪದೇ ಪದೇ ಚರ್ಚಿತಗೊಳ್ಳುವುದೋ ಅದು ಅಂತರಂಗದಲ್ಲಿ ಸುಲಭವಾಗಿರಲಿಕ್ಕಿಲ್ಲವೆಂಬ ಸತ್ಯ ನಮಗೀಗೀಗ ಗೋಚರವಾಗ ಹತ್ತಿದೆ.

ಅದುವರೆಗಿನ ವೈದಿಕಶಾಹಿ, ರಾಜಶಾಹಿ ಮತ್ತು ಪುರೋಹಿತಶಾಹಿ ದಬ್ಬಾಳಿಕೆಗಳನ್ನು ಮೆಟ್ಟಿನಿಂತು ತಮ್ಮದೇ ಆದ ವೈವಿಧ್ಯ ನೆಲೆಯ ಮಾನವತಾ ಪರಿಕರಗಳ ಮೂಲಕ ಹೊಸ ಆಲೋಚನೆಗಳನ್ನು ಹರಿಯಬಿಟ್ಟ ಶಿವಶರಣರು ವ್ಯವಸ್ಥೆಯ ನಾಡಿಮಿಡಿತಗಳನ್ನು ಅರಿತೇ ಕ್ರಾಂತಿಗೆ ಧುಮುಕಿದರು. ಬಸವ, ಅಲ್ಲಮರ ನೇತೃತ್ವದಲ್ಲಿ ಜರುಗಿದ ಈ ವಿಪ್ಲವವು ಪಟ್ಟಭದ್ರ ಹಿತಾಸಕ್ತಿಗಳನ್ನು ಬಹುಬೇಗನೆ ಅಲ್ಲಾಡಿಸಿತು. ತತ್ಪರಿಣಾಮವಾಗಿ ಬಸವಾದಿ ಪ್ರಮಥರ ವಿರುದ್ಧ ವ್ಯವಸ್ಥಿತ ಪಿತೂರಿ ಎದುರಾಯಿತು.

ಎಂಟುನೂರು ವರುಷಗಳು ಸಂದರೂ ವಚನಕಾರರ ಚಳವಳಿಯು ಈ ಹೊತ್ತಿಗೂ ಪ್ರಸ್ತುತ ಚರ್ಚೆಗೆ ಒಳಗಾಗಿರುವುದೇ ಬಸವಕ್ರಾಂತಿಯ ಐತಿಹಾಸಿಕ ಗೆಲುವಿನ ಸಂಕೇತ. ಸಮಾಜದ ಅತ್ಯಂತ 'ಕೆಳಸ್ತರ' ಎನಿಸಿಕೊಂಡಿದ್ದ ಜನರ ಮನಸ್ಸನ್ನು ಬಸವಣ್ಣನವರು ಗೆದ್ದು, ಅವರೊಂದಿಗಿದ್ದು, ತನ್ನ ಮಹದಾಂದೋಲನದಲ್ಲಿ ಸೇರಿಸಿಕೊಂಡಿದ್ದು, ಸಮಾನ ಸ್ಥಾನಮಾನ ನೀಡಿದ್ದು ಇದರ ತಕ್ಷಣದ ಗೆಲುವೇ ಆಗಿತ್ತು. ಸ್ತ್ರೀಯರ ಆತ್ಮಗೌರವಕ್ಕೆ ಮಾನ್ಯತೆ ಕೊಟ್ಟಿದ್ದು, ಸ್ತ್ರೀಯರು ಕವಯಿತ್ರಿಗಳಾಗಿ ತಂತಮ್ಮ ಶತಮಾನದ ದುಮ್ಮಾನಗಳನ್ನು ಅಭಿವ್ಯಕ್ತಿಸಲು ವೇದಿಕೆ ಒದಗಿಸಿದ್ದು ಸ್ವಲ್ಪದ ಗೆಲುವಲ್ಲ! ಇದಕ್ಕೆ ಒತ್ತಾಸೆಯಾಗಿ ನಿಂತವರು ಸಾವಿರವಾದರೆ ಪಿತೂರಿ ಮಾಡಿದವರು ನೂರಾರು ಮಂದಿ. ಧರ್ಮದ ಹೆಸರು ಹೇಳಿಕೊಂಡು ಜೀವಿಸಿದ್ದವರು ಅಧಿಕಾರದ ಮದದಿಂದ ಬೀಗುತ್ತಿದ್ದವರೊಂದಿಗೆ ಕೈಜೋಡಿಸಿದರು. ಸದಾಶಯಗಳ ಕ್ರಾಂತಿ ವಿಫಲವಾಯಿತು; ಕೇಡು ಎಂದಿನಂತೆಯೇ ಜಯದ ನಗೆ ಬೀರಿತು. ದೇಶದ ದುರಂತವಿದು.

ಇಷ್ಟಕ್ಕೂ ಶಿವಶರಣರು ಮಾಡಿದ್ದೇನು? ಆಧ್ಯಾತ್ಮಿಕ ತಳಹದಿಯ ವಿಶ್ವಧರ್ಮ ನಿರ್ಮಾಣ. ಇದಕ್ಕಾಗಿ ಪರ್ಯಾಯವನ್ನು ತೋರಿಸಿ ಕೊಟ್ಟರು. ಬುದ್ಧಿಜೀವಿಗಳೆಂಬ ಸುದ್ದಿಜೀವಿಗಳ ತೆರದಿ ಬಯ್ಯಲಿಲ್ಲ, ಸಿಡುಕಲಿಲ್ಲ. ಯಾವುದೇ ನಿರಾಕರಣೆ ಕೇವಲ ನೇತ್ಯಾತ್ಮಕವಾದರೆ, ಖಂಡನೆಗಾಗಿ ಖಂಡನೆ ಎನಿಸಿದರೆ ಅದು ಯಾವತ್ತಿಗೂ ಮೌಲಿಕವಾಗುವುದೇ ಇಲ್ಲ. ಮನುಷ್ಯನ ಕ್ಷುದ್ರತೆ, ಕುಬ್ಜತೆಗಳೊಟ್ಟಿಗೇ ಅವನ ಕಾರುಣ್ಯಪೂರಿತ ಪ್ರೇಮವನ್ನು ಅನ್ವೇಷಿಸಿ ಬದುಕಿನ ಬೆಳಕಾಗಿಸಲು ಪ್ರಯತ್ನಪಟ್ಟವರು ಶಿವಶರಣರು. ಅದುವರೆಗಿನ ಯಾವ ಧರ್ಮವೂ ಇಂಥ 'ಪಾಪಮುಂ ಪುಣ್ಯಮುಖಿ' ಎಂಬ ತತ್ತ್ವವನ್ನು ಅಳವಡಿಸಿಕೊಂಡಂತೆ ಅನಿಸದು. ಅಣ್ಣನವರು ತಮ್ಮ ಮೇಲರಿಮೆಯನ್ನು ದುರುಪಯೋಗಪಡಿಸಿಕೊಳ್ಳದೇ 'ಎನಗಿಂತ ಕಿರಿಯರಿಲ್ಲ' ಎಂದರು. 'ಮಾದಾರ ಚೆನ್ನಯ್ಯನ ಮನೆಯ ಮಗ ನಾನು' ಎಂದರು. ಇಹವನ್ನು ದೂರದೆ ಪರವನ್ನು ಕಾಣಿಸಿ ಕೊಟ್ಟದ್ದೇ ಈ ಚಳವಳಿಯ ವಿಭಿನ್ನತೆ. 'ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ' ಎಂದಿತು; 'ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು' ಎಂದಿತು. ಮೋಕ್ಷಕ್ಕಾಗಿ ಹಂಬಲಿಸುವ ವೈದಿಕ ಧೋರಣೆ ಎಂಥ ಸ್ವಾರ್ಥ

ಎಂಬುದನ್ನು ಹೆಸರಿಸದೇ ತೋರಿಸಿಕೊಟ್ಟಿತು. 'ಮಂಡೆ ಬೋಳಾದಡೇನು ಮನ ಬೋಳಾದಡಲ್ಲದೆ' ಮತ್ತು 'ನುಡಿಪಾಕವಾದಡೇನು ಮನಪಾಕವಾಗದನ್ನಕ್ಕರ' ಎಂಬ ಕಾಣ್ಕೆಗಳೇ ಆ ವರೆಗಿನ ಎಲ್ಲ ಕಂದಾಚಾರಗಳಿಗೆ ಒಡ್ಡಿದ ಸವಾಲಾಯಿತು. ಎಂಥ ಕೊಳೆಗೇರಿಯಲ್ಲೂ ನಂದನವನ ನಿರ್ಮಿಸಬಹುದೆಂಬುದನ್ನು ತೋರಿತು. ಆದರೆ ಆ ನಂದನವನವನ್ನು ಉಳಿಸಿ, ಬೆಳೆಸುವ ಯೋಗ್ಯತೆ ನಮ್ಮದಾಗಲಿಲ್ಲ.

ಧರ್ಮಗಳೆಲ್ಲ ಮತಗಳಾಗಿ, ಜಾತಿಗಳಾಗಿ ವಿಜೃಂಭಿಸುತ್ತಿದ್ದ ಕಾಲದಲ್ಲಿ ಮತಧರ್ಮವನ್ನು ಒಡೆದು ಮತವೇ ಬೇರೆ, ಧರ್ಮವೇ ಬೇರೆ; ಧರ್ಮವು ಅಧ್ಯಾತ್ಮಕ್ಕೆ ಸೋಪಾನ ಎಂಬುದನ್ನು ಆಡುನುಡಿಯಲ್ಲಿ ಸರಳವಾಗಿಸಿದ ಕೀರ್ತಿ ಶರಣರದು. ಬುದ್ಧನ ಅಹಿಂಸೆಯ ಪರಿಕಲ್ಪನೆಯೊಂದಿಗೆ ಕಾಯಕತತ್ತ್ವ, ಪ್ರಸಾದ ಸಿದ್ಧಾಂತ, ಜೀವಕಾರುಣ್ಯಗಳು, ಈ ಲೋಕದ ಬದುಕಿನ ಘನತೆ–ಗಹನತೆಗಳು ಸೇರಿಕೊಂಡು ಬಸವಪ್ರಸ್ಥಾನ ಉದಯಿಸಿತು. ಒಂದು ರೀತಿಯಲ್ಲಿ ಬುದ್ಧ ಮತ್ತು ಮಹಾವೀರರ ತತ್ತ್ವಸಿದ್ಧಾಂತಗಳ ಸಾಮಾಜಿಕ ಸ್ವರೂಪವೇ ಬಸವತತ್ತ್ವ ಎನಿಸಿಕೊಂಡಿತು. 'ದಯವೇ ಧರ್ಮದ ಮೂಲವಯ್ಯ, ದಯವಿಲ್ಲದ ಧರ್ಮ ಅದೇವುದಯ್ಯ?' ಎನ್ನುವಲ್ಲಿ ಹಾಗೂ 'ತನ್ನ ಬಣ್ಣಿಸಬೇಡ; ಇದಿರ ಹಳಿಯಲು ಬೇಡ' ಎಂಬಲ್ಲಿ ಇರುವ ನಿಷ್ಠುರ ಆದರೆ ಪ್ರಾಮಾಣಿಕ ಕಳಕಳಿ ಎಂಥ ಕಟುಕ ಹೃದಯವನ್ನೂ ಕರಗಿಸಿತು. ಇವೆಲ್ಲ ಅಧಿಕಾರದ ಅಹಮ್ಮಿನಿಂದ ಬಂದದ್ದಲ್ಲ; ಜಗತ್ತಿನ ಗೆಳೆಯನಾಗಿ ಅಂದದ್ದು ಎಂಬುದು ಆ ಕಾಲದ ಜನರಿಗೆ ಬಹುಬೇಗ ಅರ್ಥವಾಯಿತು ಎಂಬುದೇ ಪುಣ್ಯ.

'ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯ' ಎಂಬಲ್ಲಿ ಮೌಢ್ಯ ಬಿತ್ತುತ್ತ ಶೋಷಿಸುತ್ತಿದ್ದ ಜ್ಯೋತಿಷ್ಯವನ್ನು ಅಲ್ಲಗಳೆದರು. ಆ ಮೂಲಕ ಆತ್ಮವಿಶ್ವಾಸವನ್ನು ತುಂಬಿದರು. ಎಲ್ಲವನ್ನು ತ್ಯಜಿಸುವ ವೈರಾಗ್ಯ ಕಲ್ಪನೆಯನ್ನು ಒಪ್ಪದೇ ಸತಿಪತಿಗಳೊಂದಾದ ಭಕ್ತಿಯನ್ನು ಮುನ್ನೆಲೆಗೆ ತಂದರು. 'ದೇಹವೇ ದೇಗುಲ' ಎಂದರು. 'ವೇದವೆಂಬುದು ಓದಿನ ಮಾತು' ಎಂದು ಪಾಂಡಿತ್ಯವನ್ನು ಪಕ್ಕಕ್ಕಿಟ್ಟರು.

ಬಸವಕ್ರಾಂತಿಯು ಬಹು ಸಂಸ್ಕೃತಿಗಳ ನೆಲೆಯಲ್ಲಿ ಆದದ್ದು. ಶರಣರ ಹೆಸರಿನೊಂದಿಗೇ ಲಗತ್ತಾಗಿರುವ ವೃತ್ತಿ, ಕುಲ, ಸಮರ್ಪಿಸಿಕೊಂಡ ಇಷ್ಟದೈವದ ಅಂಕಿತ ಇವೆಲ್ಲವೂ ಇದನ್ನು ಸೂಚಿಸುತ್ತದೆ. ಅಸ್ಪೃಶ್ಯತೆಯ ನಿವಾರಣೆ ಎಷ್ಟು ಕಷ್ಟವೋ ಕೀಳರಿಮೆಯನ್ನು ಹೋಗಲಾಡಿಸುವುದೂ ಅಷ್ಟೇ ಕಷ್ಟ. ಇಂತಹ ಸವಾಲಿನಲ್ಲಿ ಬಸವಾದಿ ಪ್ರಮಥರು ಗೆಲುವು ಸಾಧಿಸಿದರು. ವಿಧವಾ ವಿವಾಹ, ಅಂತರ್ಜಾತಿ ವಿವಾಹಗಳು ಈ ಹೊತ್ತು ಕೂಡ ಅನೇಕ ಅಡೆತಡೆಗಳಿಂದಾಗಿ ವಿಚಾರವಂತ ಪ್ರಜ್ಞೆಗೆ ಸವಾಲಾಗಿ ನಿಂತಿವೆ. ಅಂತಹುದರಲ್ಲಿ ಆ ಕಾಲದಲ್ಲಿ ಅದನ್ನು ಸಾಧ್ಯವಾಗಿಸಿದ ಶರಣಾಂದೋಲನ ಸಹಜವಾಗಿಯೇ ಉದ್ವಿಗ್ನ ಪರಿಸ್ಥಿತಿಗೆ ಒಳಗಾಗಬೇಕಾಯಿತು. ಎಲ್ಲ ವೃತ್ತಿಗಳನ್ನೂ ಸಮಾನ ಗೌರವದಲ್ಲಿ ಕಾಣುವ ಔದಾರ್ಯ ಶರಣರ ಚಿಂತನೆಯ ಮತ್ತೊಂದು ಮಗ್ಗಲು.

ಸಂಸಾರನಿಷ್ಠೆ, ಸತಿಪತಿಭಕ್ತಿ, ಇಷ್ಟಲಿಂಗಕ್ಕೆ ಪುರಸ್ಕಾರ, ಸಹಭೋಜನ, ಪ್ರಸಾದತತ್ತ್ವ, ಕಾಯಕ ಸಿದ್ಧಾಂತ, ಸಂಪತ್ತಿನ ಸಂಗ್ರಹವಿರೋಧ ಇವೆಲ್ಲವೂ ಕೇವಲ ಸುಧಾರಣಾ ನೆಲೆಯ ಭಾವನಾತ್ಮಕ ಅಂಶಗಳಷ್ಟೇ ಎನ್ನುವುದು ಸರಿಯಲ್ಲ. ಸಾಮಾಜಿಕ, ಆರ್ಥಿಕ, ರಾಜಕೀಯದ ಪ್ರಬಲ ಅಸ್ತ್ರಗಳಾಗಿ, ಯೋಜನೆಗಳಾಗಿ ಈಗ ಇವು ಕಾಣಿಸಿಕೊಳ್ಳುತ್ತಿವೆ. 'ಕರ್ಮಣ್ಯೇವಾಧಿಕಾರಸ್ತೇ......' ಎಂಬುದಕ್ಕಿಂತ 'ಕಾಯಕದಲ್ಲಿ ನಿರುತನಾದರೆ ಗುರುಲಿಂಗವಾದರೂ ಮರೆಯಬೇಕು' ಎಂಬುದು ಹೆಚ್ಚು ಮೌಲಿಕವಾದ ಆಲೋಚನೆ. ಶರಣಚಿಂತನೆಯು ಕಾಯಕಕ್ಕೆ ಕೊಟ್ಟ ಮಹತ್ವವನ್ನು ದೇಶಕಾಲಗಳ ಹಂಗಿಲ್ಲದೇ ಅಳವಡಿಸಿಕೊಂಡಲ್ಲಿ ಬೇರು ಬಿಟ್ಟ ಅನೇಕ ರಾಷ್ಟ್ರೀಯ ಸಮಸ್ಯೆಗಳಿಗೆ ಸುಲಭ ಪರಿಹಾರ ದೊರಕೀತು! ಸ್ತ್ರೀ ಪುರುಷ ಸಮಾನತೆಯನ್ನು ಆಚರಿಸಿ ಆದರ್ಶಮಾರ್ಗವನ್ನು ನಿರ್ಮಿಸಿಕೊಟ್ಟಿದೆ. ಅಕ್ಕ, ಮುಕ್ತಾಯಕ್ಕ, ಸಂಕವ್ವೆ, ಅಂಬುಗೆ ರಾಯಮ್ಮ, ಆಯ್ದಕ್ಕಿ ಲಕ್ಕಮ್ಮ ಮುಂತಾದ ಹಲವು ವಚನಕಾರ್ತಿಯರು ಮತ್ತವರಿಂದ ರಚಿತಗೊಂಡ ವಚನಗಳು ಇಂದಿನ ಸ್ತ್ರೀವಾದಿ ಸಂಹಿತೆಯ ಬೇರೆ ಬೇರೆ ನೆಲೆಗಳೇ ಆಗಿವೆ. 'ಶರಣಸತಿ–ಲಿಂಗಪತಿ'ಯಂಥ ಮಧುರಭಕ್ತಿಯ ಸಂಕೇತವಂತೂ ಸ್ತ್ರೀಶಕ್ತಿಗೆ ನೀಡಿದ ಅಪ್ರತಿಮ ಗೌರವವೇ ಆಗಿದೆ.

ಕೆಲವೊಂದು ವಿಪರ್ಯಯಗಳನ್ನು ಪಟ್ಟಿ ಮಾಡುವುದಾದರೆ: 'ಲಾಂಛನಕ್ಕೆ ಶರಣೆಂಬೆ' ಎನ್ನುತ್ತ ಇಷ್ಟಲಿಂಗ ಕಟ್ಟಿಕೊಂಡವರು ಮಾತ್ರ ಭಕ್ತರು, ಉಳಿದವರು ಭಕ್ತರಲ್ಲ, ಭವಿಗಳು ಎಂದು ದೂರುವುದು, ಜಾತಿ–ವೃತ್ತಿ ಸೂಚಕಗಳು ಕ್ರಮೇಣ ಸಂಕುಚಿತ ಅರ್ಥದ ದ್ವೀಪಗಳಾಗಿ ಮಡುಗಟ್ಟಿ ಮತ್ತೆ ಜಾತಿಯ ಭೂತ ಹೆಗಲೇರುತ್ತದೆಂಬ ಮುಂದಾಲೋಚನೆ ಇಲ್ಲದುದು, ಪ್ರಭುತ್ವವನ್ನು ಎದುರು ಹಾಕಿಕೊಂಡುದು, ಕಾಲ ಮತ್ತು ಮನಸ್ಸುಗಳು ಪಕ್ವಗೊಳ್ಳುವ ಮೊದಲೇ ಅಂತರಜಾತಿ ಮದುವೆ ನಡೆದುಹೋದದ್ದು, ಶಿವಭಕ್ತರಲ್ಲದವರು ಚಳವಳಿಯ ವ್ಯಾಪ್ತಿಗೆ ಬರದೇ ಹೋದದ್ದು, ಅನ್ನದಾಸೋಹದ ಪ್ರಯೋಜನ ಪಡೆಯಲು ಹಲವು ಅಪಾತ್ರರು ಲಿಂಗ ಕಟ್ಟಿಕೊಂಡು ನಾಟಕವಾಡಿದ್ದು, ಜಂಗಮನೀತಿಯು ಸೋಮಾರಿಗಳಿಗೆ, ಹೊಟ್ಟೆಬಾಕರಿಗೆ ವ್ಯವಸ್ಥಿತ ನೆಲೆವೀಡಾದದ್ದು– ಹೀಗೆ ಸೋಲುಗಳನ್ನು ಸಹ ಪರಿಶೋಧಿಸಿ ಹೆಕ್ಕಬೇಕಾಗುತ್ತದೆ.

ಶರಣರ ಧಾರ್ಮಿಕ ಮತ್ತು ಸಾಮಾಜಿಕ ಕ್ರಾಂತಿ ವಿಫಲವಾಯಿತೆಂದಿಟ್ಟುಕೊಂಡರೂ ಅವರ ಸಾಹಿತ್ಯಕ ಕ್ರಾಂತಿ ಅಭೂತಪೂರ್ವ ಯಶಸ್ಸನ್ನು ಪಡೆಯಿತು. ಹಾಗೆ ನೋಡಿದರೆ ಸಾಹಿತ್ಯರಚನೆ ಅವರ ಪ್ರಾಥಮಿಕ ಗುರಿಯಾಗಿರಲಿಲ್ಲ. ಆದರೂ ಅವರ ಮಾತು, ಮಂಥನ, ವಚನ, ಅಂತರಂಗದ ಅಳಲು, ಸಾಧನೆಯ ಹಾದಿಯಲ್ಲಿ ಎದುರಾದ ಏಳುಬೀಳುಗಳು, ವಿಶ್ವಸತ್ಯವನ್ನರಿಯುವಲ್ಲಿ ಅನುಸರಿಸಿದ ನೂತನ ಮಾರ್ಗ ಇವೆಲ್ಲದರಿಂದ ವಚನಸಾಹಿತ್ಯವು ತನ್ನ ಕಾಲಕ್ಕೆ ಶ್ರೇಷ್ಠವಾಯಿತು. ವಿಶ್ವಸಾಹಿತ್ಯಕ್ಕೆ ಭಾರತೀಯ ಸಾಹಿತ್ಯಕ ಕೊಡುಗೆಗಳಲ್ಲಿ ನಿಸ್ಸಂಶಯವಾಗಿ ವಚನವಾಙ್ಮಯ ಸೇರುತ್ತದೆ.

ಅಂದಿನ ಬಹುದೊಡ್ಡ ಸಾಹಿತ್ಯ ಸಮಾರಾಧನೆಯಲ್ಲಿ ಪಾಲ್ಗೊಂಡ ಜನಸಾಮಾನ್ಯರು ಮತ್ತಾವ ಕಾಲದಲ್ಲೂ ಕಾಣಸಿಗುವುದಿಲ್ಲ. ಹಳಗನ್ನಡದ ಕ್ಲಿಷ್ಟತೆ, ಸಂಕೀರ್ಣತೆಗಳನ್ನು ನಡುಗನ್ನಡದ ಸರಳತೆಯನ್ನಾಗಿ ಪರಿವರ್ತಿಸಿದ ಕೀರ್ತಿ ಬಸವಕ್ರಾಂತಿಗೇ ಸಲ್ಲಬೇಕು. ಬದುಕಿನ ತತ್ತ್ವಜ್ಞಾನ, ಅಧ್ಯಾತ್ಮದ ಉನ್ನತ ವಿಚಾರಲಹರಿ, ತಾರ್ಕಿಕ ದ್ವಂದ್ವ, ಸ್ವಾನುಭವಗಳ ರೂಪಕಪ್ರತಿಮಾ ವಿಧಾನ ಎಲ್ಲವೂ ಕನ್ನಡದಲ್ಲಿ ಹೊಸರೀತಿಯಲ್ಲಿ, ಹೊಸ ನುಡಿಗಟ್ಟಿನಲ್ಲಿ ಒಡಮೂಡಿದವು. ಪಾರಮಾರ್ಥಿಕ ಸಂಗತಿಗಳು ಈ ಮಟ್ಟಿಗಿನ ಸರಳತೆಯಲ್ಲಿ ಕಾಣಿಸಿಕೊಂಡದ್ದು ಕನ್ನಡದ ಪುಣ್ಯ. ಚಳವಳಿಯ ಕಾಳಜಿ ಮತ್ತು ಸಾಹಿತ್ಯದ ಆಕೃತಿ– ಇವೆರಡೂ ಒಂದು ಸಮನ್ವಯದ ನೆಲೆಯಲ್ಲಿ 'ರೈಲ್ವೆಹಳಿ'ಗಳಂತೆ ಜೊತೆಗೂಡಿ ಹೋಗಿದ್ದು ಆ ಕಾಲದ ವಿಶೇಷತೆ. ತಮ್ಮ ಕ್ರಾಂತಿಯ ಪ್ರಣಾಳಿಕೆಗಳಿಗೆ ಕಲೆಗಾರಿಕೆಯ ಸ್ಪರ್ಶ ನೀಡುತ್ತ, 'ಆನು ಒಲಿದಂತೆ ಹಾಡುವೆ' ಎಂಬ ಧೀರೋದಾತ್ತ ನಿಲವನ್ನು ತೋರಿದ್ದು ಬೆರಗನ್ನುಂಟುಮಾಡುತ್ತದೆ. ಹೀಗಾಗಿಯೇ ಅವರು ಆತ್ಮಚರಿತ್ರಾತ್ಮಕ ಹಾಗೂ ಸಂಕಥನಗಳ ಮಾದರಿಯಲ್ಲಿ ಸಾಹಿತ್ಯ ಸೃಷ್ಟಿಸಿದ ಮೊದಲಿಗರೆನಿಸಿಕೊಳ್ಳುತ್ತಾರೆ. ಅಕ್ಕಮಹಾದೇವಿಯಂತೂ ಎಲ್ಲ ವಚನಕಾರರಿಗಿಂತ ವಿಭಿನ್ನವಾದ ನೆಲೆಯಲ್ಲಿ ನಿಂತು ತನ್ನ ಆತ್ಮಚರಿತ್ರೆಯನ್ನು ಆಧ್ಯಾತ್ಮಿಕ ಪರಿವೇಷದೊಳಗೆ ಸಂಯೋಜಿಸುತ್ತಾಳೆ.

ಇಂಥ ಒಂದು ವಿಪ್ಲವದಲ್ಲಿ ಜಯದ ಅಂಶಗಳಿದ್ದರೆ ಅದು ಅಂದಿನ ಅನುಭಾವಿ ಸಂತರಿಗೆ ಸಲ್ಲಬೇಕು. ಆದರೆ ಸೋಲಿನ ಕಹಿ ಮಾತ್ರ ನಿಜಕ್ಕೂ ನಮ್ಮ ಜವಾಬ್ದಾರಿ. ಪರಿವರ್ತನಕ್ಕೆ ಒಗ್ಗೊಡದ, 'ಕಲ್ಯಾಣ' ರಾಜ್ಯಕ್ಕೆ ಸಹಕರಿಸದ ನಮ್ಮೊಳಗಿನ ಕ್ಷುದ್ರತೆಯೇ ಸೋಲಿನ ಹೊಣೆಗಾರಿಕೆಯನ್ನು ಹೊರಬೇಕು. ಒಂದಂತೂ ಸ್ಪಷ್ಟ: ಸೋಲು ಕೂಡ ಗೆಲುವಾಗಿ ಕಾಣಿಸುವುದೇ ಬಸವಪ್ರಸ್ಥಾನದ ಬಹು ದೊಡ್ಡ ಮಾರ್ಮಿಕತೆ!

****************************************

ದಿನಾಂಕ: 12–07–2016 ಡಾ. ಹೆಚ್ ಎನ್ ಮಂಜುರಾಜ್, ಕೃಷ್ಣರಾಜನಗರ

ತಾಂತ್ರಿಕ ವಿವರ: OS: Windows 7, Microsoft office 2007, Nudi font style 01, font size 12, A4 size